ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೬ನೇ ಸೆಪ್ಟೆಂಬರ್ ೧೯೯೩, ಬಾದ್ರಪದ, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೧೧-೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ)ಅವರು ಪೀಠವನ್ನು ಅಲಂಕರಿಸಿದ್ದರು.

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಸಿಂಧನೂರಿನಿಂದ ಬಪ್ಪೂರು ಹಾಗೂ ಒಳಬಳ್ಳಾರಿ ರಸ್ತೆಗಳು.

527 - ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗ ದಯವಿಟ್ಟು ಉತ್ತರಿಸುವಿರೆ?

ಅ) ಸಿಂಧನೂರುನಿಂದ ಬಪ್ಪೂರು ಹಾಗೂ ಒಳಬಳ್ಳಾರಿ ರಸ್ತೆಗಳನ್ನು ಎಂ.ಡಿ.ಆರ್. ರಸ್ತೆಗಳನ್ನಾಗಿ ಮಾಡಿದ ಮೇಲೆ ಸರಕಾರ ಈ ರಸ್ತೆಯ ಅಭಿವೃದ್ಧಿ ಕೆಲಸಗಳಿಗೆ ಬಿಡುಗಡೆ ಮಾಡಿದ ಹಣ ಎಷ್ಟು ಹಾಗೂ ಖರ್ಚಾದ ಹಣವೆಷ್ಟು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಸದರಿ ರಸ್ತೆಗಳನ್ನು ಮೇ 92ರಲ್ಲಿ ಮುಖ್ಯ ಜಿಲ್ಲಾ ರಸ್ತೆಗಳನ್ನಾಗಿ ಮೇಲ್ದರ್ಜೆ ಏರಿಸಲಾಯಿತು. ಈ ರಸ್ತೆಗಳ ಕೆಲವು ಭಾಗಗಳಿಗೆ ಜಿಲ್ಲಾ ಪರಿಷತ್ತಿನಿಂದ ಅನುದಾನವನ್ನು 92-93ರಲ್ಲಿ ನಿಗದಿ ಪಡಿಸಿದ್ದುದರಿಂದ ಆ ಭಾಗಗಳನ್ನು ರಸ್ತೆಗಳನ್ನು ಮೇಲ್ದರ್ಜೆಗೇರಿಸಿದ ನಂತರ ಎಲ್ಲಾ ಪರಿಷತ್ತಿನ ವತಿಯಿಂದಲೇ ಅಭಿವೃದ್ಧಿ ಪಡಿಸಿದ್ದಾರೆ. ಈ ರಸ್ತೆಗಳಿಗೆ ನೀಡಲಾಗಿರುವ ಅನುದಾನ ಹಾಗೂ ವೆಚ್ಚಗಳ ವಿವರ ಕೆಳಕಂಡಂತಿದೆ :

(ಲಕ್ಷ ರೂ.ಗಳಲ್ಲಿ)

ರಸ್ತೆ	ವರ್ಷ	ಅನುದಾನ	ವೆಚ್ಚ
1. ಸಿಂಧನೂರು-ಬಪ್ಪೂರು ರಸ್ತೆ			
ಅ) ಲೋಕೋಪಯೋಗಿ	92-93	1.58	1.58
ಇಲಾಖೆ ವತಿಯಿಂದ	93-94	-	0.51
ಆ) ಜಿಲ್ಲಾ ಪರಿಷತ್ತು	92-93	4.00	9.70
ವತಿಯಿಂದ	93-94	1.80	0.65
ಒಟ್ಟು		**7.38**	**12.44**
2. ಸಿಂದನೂರು- ಒಳಬಳ್ಳಾರಿ ರಸ್ತೆ			
ಅ) ಲೋಕೋಪಯೋಗಿ	92-93	1.62	1.62
ಇಲಾಖೆ ವತಿಯಿಂದ	93-94	-	0.71
ಆ) ಜಿಲ್ಲಾ ಪರಿಷತ್ತಿನ	92-93	2.00	1.23
ವತಿಯಿಂದ	93-94	8.83	0.49
ಒಟ್ಟು		**12.45**	**4.05**

ಶ್ರೀ ಬಿ. ಹಂಪನಗೌಡ : ಮಾನ್ಯ ಅಧ್ಯಕ್ಷರೇ, ಸಿಂಧನೂರು ಬಪ್ಪೂರುರಸ್ತೆ ಮತ್ತು ಒಳಬಳ್ಳಾರಿ ರಸ್ತೆಗಳಿಗೆ 4.05 ಲಕ್ಷ ರೂಪಾಯಿ ಖರ್ಚಾಗಿದೆ ಎಂದು ಮಾನ್ಯ ಮಂತ್ರಿಗಳು ಉತ್ತರದಲ್ಲಿ ಹೇಳಿದ್ದಾರೆ. ಆದರೆ ಅಲ್ಲಿನ ಪರಿಸ್ಥಿತಿ ಬೇರೆ. ಈ ನಾಲ್ಕೂವರೆ ಲಕ್ಷ ರೂಪಾಯಿ ಬೋಗಸ್ ಬಿಲ್ ಮಾಡಿ ಅಲ್ಲಿ ಕೆಲಸ ಮಾಡದೇ ಸಂಬಂಧಪಟ್ಟ ಅಧಿಕಾರಿಗಳು ಅವ್ಯವಹಾರ ಮಾಡಿದ್ದಾರೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೆ ಆ ಅಧಿಕಾರಿಗಳ ಮೇಲೆ ಏನು ಕ್ರಮ ಕೈಗೊಂಡಿದ್ದೀರಿ? ಮತ್ತು ಈ ರಸ್ತೆಗಳನ್ನು ಸರ್ಕಾರದಿಂದ ಮೇಲ್ದರ್ಜೆಗೆ ಏರಿಸಿದ ಮೇಲೆ ಸ್ಪೆಷಲ್ ಗ್ರಾಂಟ್ ಎಸ್.ಆರ್. ಮತ್ತು ಓ.ಆರ್. ಎಷ್ಟು ಹಣ ಈ ರಸ್ತೆಗಳಿಗೆ ಬಿಡುಗಡೆ ಮಾಡಲಾಗಿದೆ?

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಅವ್ಯವಹಾರದ ಬಗ್ಗೆ ಸರ್ಕಾರಕ್ಕೆ ಯಾವ ಆಪಾದನೆಯೂ ಬಂದಿಲ್ಲ. ಆ ಬಗ್ಗೆ ಏನು ಹೇಗೆ ಎಂದು ಮಾನ್ಯ ಸದಸ್ಯರು ಬರೆದು ಕಳುಹಿಸಿದರೆ ನಾನು ವಿಚಾರಣೆ ಮಾಡಿಸುತ್ತೇನೆ. ಮತ್ತೆ ಅಲ್ಲಿ ಖರ್ಚು ನಾಲ್ಕೂವರೆ ಲಕ್ಷ ಅಲ್ಲ; ಇನ್ನೂ ಜಾಸ್ತಿ ಆಗಿದೆ. ಸಿಂಧನೂರು-ಬಪ್ಪೂರು ರಸ್ತೆ 24 ಕಿ.ಮಿ ಇದ್ದು, ಸಿಂಧನೂರು-ಒಳಬಳ್ಳಾರಿ ರಸ್ತೆ 22 ಕಿ.ಮಿ. ಇದೆ. ಇದಕ್ಕೆ ಲೋಕೋಪಯೋಗಿ ಇಲಾಖೆಯಿಂದ 1992-93ರಲ್ಲಿ 1.58 ಲಕ್ಷ ರೂಪಾಯಿ ಖರ್ಚು ಆಗಿದೆ. ಮತ್ತು ಜಿಲ್ಲಾ ಪರಿಷತ್ತಿನಿಂದ 4.00 ಲಕ್ಷ ರೂಪಾಯಿ ಅನುದಾನ ಇಟ್ಟರೆ 9.70 ಲಕ್ಷ ರೂಪಾಯಿ ಖರ್ಚು ಆಗಿದೆ. ಹೀಗಾಗಿ ಒಟ್ಟು 12.44 ಲಕ್ಷ ರೂಪಾಯಿ ಖರ್ಚು ಆಗಿದೆ. ಸಿಂಧನೂರು-ಒಳಬಳ್ಳಾರಿ ರಸ್ತೆಗೆ ಲೋಕೋಪಯೋಗಿ ಇಲಾಖೆ ವತಿಯಿಂದ 1.62 ಲಕ್ಷ ರೂಪಾಯಿ ಅನುದಾನ ಇಡಲಾಗಿದೆ. ಜಿಲ್ಲಾಪರಿಷತ್ತಿನಿಂದ 10.83 ಲಕ್ಷ ರೂಪಾಯಿ. ಒಟ್ಟು ವೆಚ್ಚ 4,500. ಇಷ್ಟು ಪ್ರಮಾಣದಲ್ಲಿ ಖರ್ಚು ಆಗಿ, ಕೆಲಸ ನಡೆಯುತ್ತಿದೆ. ಇಂಜಿನಿಯರುಗಳು ಹಣ ಇಟ್ಟಿರುವುದಕ್ಕಿಂತ ಜಾಸ್ತಿ ಖರ್ಚು ಮಾಡತಕ್ಕ ಪ್ರತೀತಿ ಏನು ಬೆಳೆಸಿಕೊಂಡು ಬಂದಿದ್ದಾರೆ ಅದನ್ನು ಸರ್ಕಾರ ತೀವ್ರವಾಗಿ ನೋಡುತ್ತದೆ. ಏನೋ 1 ಲಕ್ಷ ಅಥವಾ 50 ಸಾವಿರ ಹೆಚ್ಚು ಕಡಿಮೆಯಾದರೆ ಸರಿ. ತಾವು ಕಂಡ ಹಾಗೆ ಇಲ್ಲಿ 4 ಲಕ್ಷ ಅನುದಾನ ಇರುವ ಕಡೆ 9 ಲಕ್ಷ 70 ಸಾವಿರ ರೂಪಾಯಿ ಖರ್ಚು ಮಾಡುತ್ತಾರೆಂದರೆ ಯಾರಯಾರದೋ ಒತ್ತಾಯಕ್ಕೆ ಖರ್ಚು ಮಾಡಿರುತ್ತಾರೆ. ಇಲ್ಲಿ ಮಾನ್ಯ ಸದಸ್ಯರು ಆಪಾದನೆ ಮಾಡಿದ ಹಾಗೆ, ಹಣವನ್ನು ಖರ್ಚುಮಾಡಿ ಅಲ್ಲಿ ಏನೂ ಇಲ್ಲದೆ ಇರತಕ್ಕದ್ದು ಮಾಡಿದರೂ ಮಾಡಿರುತ್ತಾರೆ. ಅದನ್ನು ಸರ್ಕಾರ ಬಹಳ ತೀವ್ರತೆಯಿಂದ ಪರಿಗಣಿಸುತ್ತದೆ ಎಂದು ಸದನಕ್ಕೆ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಶ್ರೀ ಬಿ. ಹಂಪನಗೌಡ : ಕಳೆದ ಒಂದು ತಿಂಗಳಿನಿಂದ ಆ ಅಧಿಕಾರಿ ಕಛೇರಿಯಲ್ಲಿ ಕೆಲಸ ಮಾಡುತ್ತಿಲ್ಲ. ಅದರ ಬಗ್ಗೆ ಚೀಫ್ ಇಂಜಿನಿಯರ್‌ರವರು ಎಲ್ಲಾ ಇನ್ಸ್‌ಪೆಕ್ಷನ್ ಮಾಡಿಸಿ ರಿಪೋರ್ಟ್ ಹಾಕಿದ್ದಾರೆ. ಆದರೆ ಮಂತ್ರಿಗಳು ಅದು ಇನ್ನು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದು ಹೇಳುತ್ತಿದ್ದಾರೆ. ಇದನ್ನು ತೀವ್ರಗತಿಯಲ್ಲಿ ವಿಚಾರಣೆ ಮಾಡಿ ಆ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ಅಲ್ಲಿಗೆ ಬೇರೆ ಒಳ್ಳೆಯ ಒಬ್ಬ ಅಧಿಕಾರಿಯನ್ನು ಪೋಸ್ಟಿಂಗ್ ಮಾಡಿ. ಈ ಎರಡು ರಸ್ತೆಗಳು ಪ್ರಮುಖವಾಗಿರತಕ್ಕ ರಸ್ತೆಗಳು. ಏಕೆಂದರೆ 30 ಹಳ್ಳಿಗಳಿಗೆ ಸಂಪರ್ಕವಿರತಕ್ಕ ರಸ್ತೆಗಳ ಗತಿ ಹೀಗಾದರೆ ಇನ್ನು ಜನಗಳ ಗತಿ ಹೇಗೆ? ಆದ್ದರಿಂದ ದಯವಿಟ್ಟು ಸರ್ಕಾರ ಇದರ ಬಗ್ಗೆ ತೀವ್ರ ಕ್ರಮ ತೆಗೆದು ಕೊಂಡು ಆ ಅಧಿಕಾರಿಯ ಮೇಲೆ ಮೊದಲು ಕ್ರಮ ತೆಗೆದುಕೊಂಡು ಆ ರಸ್ತೆಗಳನ್ನು ಬೇಗ ಅಭಿವೃದ್ಧಿ ಪಡಿಸಬೇಕು.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೆ, ಆಪಾದನೆಯ ಬಗ್ಗೆ ಉತ್ತರ ಏಕೆ ಹೇಳಲಿಲ್ಲ. ಅಂದರೆ ಪ್ರಶ್ನೆಯಿಲ್ಲದೆ ಇದ್ದುದರಿಂದ ಹೇಳುವುದಕ್ಕೆ ಸಾಧ್ಯವಾಗಲಿಲ್ಲ. ಅದು ಸರ್ಕಾರಕ್ಕೆ ಬಂದಿರಬಹುದು. ನನ್ನ ಮಟ್ಟಕ್ಕೆ ಬಂದಿಲ್ಲ. ಅದು ಮುಖ್ಯ

ಇಂಜಿನಿಯರ್‌ರವರ ಮಟ್ಟದಲ್ಲಿರಬಹುದು ಅಥವಾ ಕಾರ್ಯದರ್ಶಿಯವರ ಮಟ್ಟದಲ್ಲಿರಬಹುದು. ಅದನ್ನು ತೀವ್ರವಾಗಿ ಪರಿಶೀಲನೆ ಮಾಡಿಸುತ್ತೇನೆ.

ರಾಷ್ಟ್ರೀಯ ಹೆದ್ದಾರಿ ಮತ್ತು ರಾಜ್ಯ ಹೆದ್ದಾರಿಗಳಲ್ಲಿ ಬೈಪಾಸ್ ರಸ್ತೆಗಳು.

676 - ಶ್ರೀ ಪಿ.ಜಿ.ಆರ್ ಸಿಂಧ್ಯ (ಕನಕಪುರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 20,000 ಜನಸಂಖ್ಯೆ ಇರುವ ಬಹಳ ಪಟ್ಟಣ ಪ್ರದೇಶಗಳಲ್ಲಿ ಲೋಕೋಪಯೋಗಿ ರಸ್ತೆಗಳಲ್ಲಿ ಸಂಚಾರ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಇಂತಹ ಪಟ್ಟಣ ಪ್ರದೇಶಗಳಲ್ಲಿ ಬರುವ ಎಲ್ಲಾ ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಬೈಪಾಸ್ ರಸ್ತೆ ನಿರ್ಮಾಣ ಮಾಡುವ ಪ್ರಸ್ತಾಪವು ಸರ್ಕಾರದ ಮುಂದಿದೆಯೇ?

ಇ) ಹಾಗಿದ್ದಲ್ಲಿ ಕಾರ್ಯಕ್ರಮವೇನು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) ಪಟ್ಟಣ ಪ್ರದೇಶಗಳಲ್ಲಿ ಬರುವ ಎಲ್ಲಾ ರಾಜ್ಯ ಹೆದ್ದಾರಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಬೈಪಾಸ್ ಮಾಡುವ ಸಮಗ್ರ ಪ್ರಸ್ತಾಪ ಇರುವುದಿಲ್ಲ. ಸಂಚಾರ ದಟ್ಟಣೆ ತೀವ್ರತೆ ಹಾಗೂ ಅನುದಾನದ ಲಭ್ಯತೆ ಇವುಗಳನ್ನು ಅನುಸರಿಸಿ ನಗರ ಪ್ರದೇಶದಲ್ಲಿ ಬೈಪಾಸ್ ನಿರ್ಮಾಣವನ್ನು ಮಾಡಲಾಗುತ್ತಿದೆ.

ಇ) ಪಟ್ಟಣ ಪ್ರದೇಶಗಳಲ್ಲಿ ಬರುವ ಎಲ್ಲಾ ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಬೈಪಾಸ್ ಮಾಡುವ ಸಮಗ್ರ ಕಾರ್ಯಕ್ರಮ ರೂಪಿಸಿಲ್ಲ. ಸಂಚಾರ ದಟ್ಟಣೆ ತೀವ್ರತೆ, ತುರ್ತು ಅವಶ್ಯಕತೆ ಹಾಗೂ ಅನುದಾನದ ಲಭ್ಯತೆಗಳನ್ನು ಅನುಸರಿಸಿ ಬೈಪಾಸ್ ನಿರ್ಮಾಣವನ್ನು ಮಾಡಲಾಗುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಿಂದ ನಾನು ಎರಡು ಉಪಪ್ರಶ್ನೆಗಳನ್ನು ಮಾನ್ಯ ಸಚಿವರಿಗೆ ಕೇಳುತ್ತಿದ್ದೇನೆ. ಇದು ಇಡೀ ರಾಜ್ಯಕ್ಕೆ ವ್ಯಾಪಕವಾಗಿರತಕ್ಕ ಪ್ರಶ್ನೆ. ಬಹಳ ಕಡೆಗಳಲ್ಲಿ ಬೈಪಾಸ್ ರಸ್ತೆಗಳನ್ನು ಮಾಡದಿರುವುದರಿಂದ ತೊಂದರೆಯಾಗಿದೆ. 175 ತಾಲ್ಲೂಕುಗಳಲ್ಲಿ 250 ಪಟ್ಟಣಗಳ ಪೈಕಿ 40-50 ಪಟ್ಟಣಗಳಲ್ಲಿ ಬೈಪಾಸ್ ರಸ್ತೆಗಳು ಆಗಿರಬಹುದು. ಇನ್ನು 200 ಪಟ್ಟಣಗಳಿಗೆ ಬೈಪಾಸ್ ರಸ್ತೆಗಳನ್ನು ನಾವು ಮಾಡಬೇಕಾಗುತ್ತದೆ. ಬೈಪಾಸ್ ರಸ್ತೆಗಳನ್ನು ಮಾಡಬೇಕಾದರೆ ಅದಕ್ಕೆ ಎಷ್ಟು ಹಣ ಬೇಕಾಗುತ್ತದೆ? ಅಲ್ಲಿ ನ್ಯಾಷನಲ್ ಹೈವೇ ಮತ್ತು ಸ್ಟೇಟ್ ಹೈವೇಗಳು ಎಷ್ಟು ಪಾಸಾಗುತ್ತವೆ? ಕೇಂದ್ರ ಸರ್ಕಾರದಿಂದ ನಾವು ಏನಾದರೂ ಸಾಲ ತೆಗೆದುಕೊಳ್ಳುವುದಕ್ಕೆ ಆಗುತ್ತದೆಯೇ ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಏಕೆಂದರೆ, ತಮಗೆ ಗೊತ್ತಿರುವ ಹಾಗೆ ಬಹುತೇಕ ಪಟ್ಟಣಗಳಲ್ಲಿ ಸುಮಾರು 4 ಕಿಲೋಮೀಟರ್ ಹೋಗಬೇಕಾದರೆ 1 ಗಂಟೆ ಸಮಯ ಬೇಕಾಗುತ್ತದೆ. ಪುತ್ತೂರು ಇಂತಹ ಕಡೆಗಳಲ್ಲಿ ಈಗ ಬೈಪಾಸ್ ರಸ್ತೆ ಆಗುತ್ತಾ ಇದೆ. ನಮ್ಮ ಕನಕಪುರದಲ್ಲಿ 2 ಕಿಲೋಮೀಟರ್ ಈ ಕಡೆಯಿಂದ ಆ ಕಡೆಗೆ ಹೋಗಬೇಕಾದರೆ ಅರ್ಧಗಂಟೆ ಬೇಕಾಗುತ್ತದೆ. ಇದರಿಂದ ಬೇಕಾದಷ್ಟು ಡೀಸಲ್ ಮತ್ತು ಪೆಟ್ರೋಲ್ ವೇಸ್ಟ್ ಆಗುತ್ತದೆ. ಆದ್ದರಿಂದ ಒಂದು ಕಾಂಪ್ರಹೆನ್ಸಿವ್ ಪ್ರಾಜೆಕ್ಟನ್ನು ನೀವು ತಯಾರು ಮಾಡಿ ವರ್ಲ್ಡ್‌ಬ್ಯಾಂಕ್ ಸಹಾಯ ಪಡೆಯುವುದಕ್ಕೆ ಸಾಧ್ಯವೇ? ಅಥವಾ ಕೇಂದ್ರದ ಸಹಾಯ ಪಡೆಯುವುದಕ್ಕೆ ಸಾಧ್ಯವೆ? ನಮ್ಮ ರಾಜ್ಯಸರ್ಕಾರದವರು ಲೋಕೋಪಯೋಗಿ ಇಲಾಖೆಮತಿಯಿಂದ ಹೊಸದಾಗಿ ಏನು ರಸ್ತೆಗಳನ್ನು ಮಾಡುತ್ತಿದ್ದಾರೆ, ಅದರಲ್ಲಿ ಇದಕ್ಕೆ ಸ್ವಲ್ಪ ಹಣವನ್ನು ತೆಗೆದುಕೊಂಡು ಬೈಪಾಸ್ ರಸ್ತೆಗಳನ್ನು ಮಾಡಲಿ. ಇಲ್ಲದಿದ್ದರೆ ಏನಾಗುತ್ತದೆಂದರೆ, ಪಟ್ಟಣಪ್ರದೇಶಗಳಲ್ಲಿ ಜಮೀನು ಸಿಗುವುದು ಕಷ್ಟವಾಗುತ್ತದೆ. ಈಗಲೇ